158ನೇಕ್ರಮ 221
4ff
16/04/26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ಸೂಚನೆ:**

ಶಿವಮೊಗ್ಗ ನಗರಸಭೆ ವ್ಯಾಪ್ತಿಯ ಹೊಸ ಮನ ಬಡಾವಣೆಯಲ್ಲಿ 1988 ರಲ್ಲಿ ನಗರಸಭೆ ವತಿಯಿಂದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಗಳು ಸಹಿ ಮಾಡಿ ಕೂಲಿ ಕಾರ್ಮಿಕರಿಗೆ ಹಕ್ಕುಪತ್ರ ನೀಡಿರುತ್ತಾರೆ. ಸದರಿ ನಿವೇಶನದಲ್ಲಿ ಮನ ಕಟ್ಟಿಕೊಂಡವರಿಗೆ ಕೆಲವರಿಗೆ ಖಾತೆ ದಾಖಲಾಗಿದೆ. ಇನ್ನು ಕೆಲವರಿಗೆ ಖಾತೆ ಮಾಡಿರುವುದಿಲ್ಲ. ಸದರಿ ಮನೆಗಳ ಮಾಲೀಕರಿಗೆ ಬ್ಯಾಂಕಿನಿಂದ ಸಾಲ ಪಡೆದು ಮನೆ ಕಟ್ಟಲು ಮಾರಾಟ ಮಾಡಲು ವಿಭಾಗ ಪತ್ರ ದಾನಪತ್ರ ಮಾಡಿಕೊಳ್ಳಲು ತೊಂದರೆಯಾಗಿರುತ್ತದೆ. ಆದರಿಂದ ಹಕ್ಕು ಪತ್ರ ಪಡೆದ ಎಲ್ಲರ ನಿವೇಶನ ಮನೆಗಳನ್ನು ಗುರಿತಿಸಿ ಮಹಾನಗರ ಪಾಲಿಕೆಯಿಂದ ದಾಖಲು ಮಾಡಿ ಅನುಕೂಲ ಮಾಡಿಕೊಡುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಶಿವಮೊಗ್ಗ ನಗರಸಭೆ ವ್ಯಾಪ್ತಿಯ ವಾರ್ಡ್ ಸಂಖ್ಯೆ:20 ರ ಹೊಸಮನೆ ಬಡಾವಣೆಯಲ್ಲಿ 'ಹಂಗಾಮಿಯಾಗಿ ಅನಧಿಕೃತವಾಗಿ ಮನೆ ಕಟ್ಟಿಕೊಂಡಿರುವವರಿಗೆ ಪಾಲಿಕೆಯ ಹಕ್ಕುಪತ್ರ ನೀಡಿರುವ ರಿಜಿಸ್ಟರ್ ಸಂಖ್ಯೆ 362 ಪುಟ ಸಂಖ್ಯೆ 192 ರಿಂದ 245 ರವರೆಗೆ ನಮೂದಿಸಿರುವಂತೆ ಒಟ್ಟು 42 + 89 = 131 ಕ್ರಮ ಸಂಖ್ಯೆಗಳಲ್ಲಿ ವಿವಿಧ ಹೆಸರುಗಳಿಗೆ ಹಕ್ಕುಪತ್ರ ನೀಡಿರುವುದು ನಮೂದಾಗಿರುತ್ತದೆ.

ಸದರಿ ನಮೂದಿನಲ್ಲಿರುವಂತಹ ನಿರ್ದಿಷ್ಟ ಆಸ್ತಿ ಮಾಲೀಕರು ಸಂಬಂಧಪಟ್ಟಂತಹ ಹಕ್ಕು ಪತ್ರಗಳ ದಾಖಲಾತಿಗಳೊಡನೆ ಸ್ವವಿವರ ದಾಖಲಾತಿಗಳೊಂದಿಗೆ ಮತ್ತು "Sale Certificate" ಮಾಡಿಕೊಂಡಿರುವವರು ಅವಶ್ಯ ದಾಖಲಾತಿಗಳ ಅನುಸಾರ ಅರ್ಜಿ ಸಲ್ಲಿಸಿ ಮಹಾನಗರ ಪಾಲಿಕೆಯಲ್ಲಿ ಒಟ್ಟು 22 ಜನರಿಗೆ MAR 19 / SAS /KMF ಪುಸ್ತಕದಲ್ಲಿ ಖಾತಾ ನೀಡುವ ಸಂಬಂಧ ದಾಖಲಿಸಿರುತ್ತದೆ ಹಾಗೂ ಖಾತೆಯನ್ನು ಮಹಾನಗರ ಪಾಲಿಕೆಯಿಂದ ನೀಡಲಾಗಿರುತ್ತದೆ.

ಮುಂದುವರೆದಂತೆ ಬಾಕಿ ಇರುವ 109 ಸಂಖ್ಯೆಯ ಹಕ್ಕುಪತ್ರದಾರರು ಸಂಬಂಧಿಸಿದ ಹಕ್ಕುಪತ್ರ ಗುರುತಿನ ಚೀಟಿ ಈ ಹಿಂದೆ 1992 ರಲ್ಲಿ ಹಾಗೂ ತಾವು ಮಾಡಿಕೊಂಡಿರುವ "Sale Certificate" ಜೊತೆ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಪಾಲಿಕೆಗೆ ಸಲ್ಲಿಸಿದ್ದಲ್ಲಿ ನಿಯಮಾನುಸಾರ ಹೊಸ "ಇ-ಆಸ್ತಿ ತಂತ್ರಾಂಶ"ದಲ್ಲಿ ದಾಖಲಿಸಿ "ಇ- ಆಸ್ತಿ ಖಾತೆ"ಯನ್ನು ನೀಡಲು ಪಾಲಿಕೆಯಿಂದ ನಿಯಮಾನುಸಾರ ಪರಿಶೀಲಿಸಿ, ಕ್ರಮವಹಿಸಲಾಗುತ್ತದೆ.

---

**ಕಡತ ಸಂಖ್ಯೆ: ನಅಇ 15 ಶಿಮಹಾ 2026 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು